# ನಮಾಝ್ ಕಸ್ರ್ ಮಾಡಬಹುದಾದ ಸಫರ್

[ السفر الذي يجيز القصر ]

[Kannada – ಕನ್ನಡ – كنادي ]


ಅಶ್ಶೈಖ್ ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ (ﷺ)

الشيخ محمد ناصر الدين الألباني رحمه الله تعالى

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ترجمة: محمد حمزة بتوري



IslamHouse.com

1435 – 2014

بِسْمِ اللهِ الرَّحْمَـنِ الرَّحِيم

ಅಶ್ಶೈಖ್ ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ(ﷺ) ತಮ್ಮ 'ಸಿಲ್ಸಿಲತುಲ್ ಅಹಾದೀಸಿ ಸ್ಸಹೀಹಃ'ದಲ್ಲಿ (163) ಹೇಳುತ್ತಾರೆ:

كَانَ رَسُولُ اللَّهِ ﷺ إِذَا خَرَجَ مَسِيرَةَ ثَلَاثَةِ أَمْيَالٍ أَوْ ثَلَاثَةِ فَرَاسِخَ [شَكَّ شُعْبَةُ] قَصَرَ الصَّلَاةَ [وَفِي رِوَايَةٍ: صَلَّى رَكْعَتَيْنِ].

**"ಪ್ರವಾದಿ(ﷺ)ರವರು ಮೂರು ಮೈಲ್ ಅಥವಾ ಮೂರು ಫರ್ಸಖ್ (ಈ ಸಂಶಯವು ವರದಿಗಾರರಾದ ಶುಅ್‌ಬಃರದ್ದಾಗಿದೆ) ನಷ್ಟು ದೂರ ಪ್ರಯಾಣ ಮಾಡಿದರೆ ಅವರು ನಮಾಝನ್ನು ಕಸ್ರ್ ಮಾಡುತ್ತಿದ್ದರು. (ಇನ್ನೊಂದು ವರದಿಯಲ್ಲಿ: ಎರಡೆರಡು ರಕ್‌ಅತ್ ನಮಾಝ್ ಮಾಡುತ್ತಿದ್ದರು)." [ಮುಸ್ಲಿಮ್]**

ಒಂದು ಫರ್ಸಖ್ ಎಂದರೆ ಮೂರು ಮೈಲ್. ಒಂದು ಮೈಲ್ ಎಂದರೆ ಕಣ್ಣಿಗೆ ಗೋಚರಿಸುವಷ್ಟು ದೂರ. ಯಾಕೆಂದರೆ ಕಣ್ಣಿಗೆ ಗೋಚರಿಸದೆ ಭೂಮಿಯ ಮೇಲ್ಮೈಯಲ್ಲಿ ವಾಲಿಕೊಳ್ಳುವುದನ್ನು 'ಮೈಲ್' ಎನ್ನಲಾಗುತ್ತದೆ ಎಂದು (ಭಾಷಾ ಶಾಸ್ತ್ರಜ್ಞರಾದ) ಅಲ್‌ಜೌಹರೀ ಖಚಿತವಾಗಿ ಹೇಳಿದ್ದಾರೆ.

ಹೀಗೂ ಹೇಳಲಾಗುತ್ತದೆ: ಸಮತಟ್ಟಾದ ಒಂದು ಪ್ರದೇಶದಲ್ಲಿ ನಿಂತು ದೂರದಲ್ಲಿರುವ ಒಬ್ಬ ವ್ಯಕ್ತಿಯನ್ನು ನೋಡುವಾಗ ಅದು ಪುರುಷನೋ ಅಥವಾ ಮಹಿಳೆಯೋ, ಹೋಗುತ್ತಿದ್ದಾನೋ ಅಥವಾ ಬರುತ್ತಿದ್ದಾನೋ ಎಂಬುದನ್ನು ಅರಿಯಲು ಸಾಧ್ಯವಾಗದಿದ್ದರೆ ಆ ದೂರವನ್ನು ಒಂದು 'ಮೈಲ್' ಎಂದು ಹೇಳಲಾಗುತ್ತದೆ. ಇದನ್ನು 'ಫತ್‌ಹುಲ್ ಬಾರಿ'ಯಲ್ಲಿ ಕಾಣಬಹುದು. ಕೆಲವು ಆಧುನಿಕ ವಿದ್ವಾಂಸರು ಅಭಿಪ್ರಾಯಪಡುವ ಪ್ರಕಾರ ಒಂದು ಮೈಲ್ ಎಂದರೆ ಸುಮಾರು 1,620 ಮೀಟರ್ ದೂರ.

ಒಬ್ಬ ವ್ಯಕ್ತಿ ಮೂರು ಫರ್ಸಖ್ ದೂರ, [ಒಂದು ಫರ್ಸಖ್ ಎಂದರೆ ಸುಮಾರು ಎಂಟು ಕಿ.ಮೀ] ಪ್ರಯಾಣ ಮಾಡಿದರೆ ಅವನಿಗೆ ಕಸ್ರ್ ಮಾಡಲು ಅನುಮತಿಯಿದೆಯೆಂದು ಈ ಹದೀಸ್ ಸೂಚಿಸುತ್ತದೆ.

ಅಲ್‌ಖತ್ತಾಬೀ ತಮ್ಮ 'ಮಆಲಿಮು ಸ್ಸುನನ್'ನಲ್ಲಿ ಹೇಳುತ್ತಾರೆ:

إِنْ ثَبَتَ الْحَدِيثُ كَانَتِ الثَّلَاثَةُ الْفَرَاسِخُ حَدًّا فِيمَا يُقْصَرُ إِلَيْهِ الصَّلَاةُ، إِلَّا أَنِّي لَا أَعْرِفُ أَحَدًا مِنَ الْفُقَهَاءِ يَقُولُ بِهِ.

**“ಈ ಹದೀಸ್ ಸಹೀಹ್ ಎಂದು ದೃಢಪಟ್ಟರೆ ನಮಾಝನ್ನು ಕಸ್ರ್ ಮಾಡುವ ವಿಷಯದಲ್ಲಿ ಮೂರು ಫರ್ಸಖ್‌ಗಳು ಒಂದು ಗಡಿಯಾಗುತ್ತದೆ. ಆದರೆ ಕರ್ಮಶಾಸ್ತ್ರಜ್ಞರ ಪೈಕಿ ಯಾರಾದರೂ ಈ ರೀತಿ ಅಭಿಪ್ರಾಯಪಟ್ಟಿರುವುದನ್ನು ನಾನು ಅರಿತಿಲ್ಲ.”**

ಅನೇಕ ಕಾರಣಗಳಿಂದಾಗಿ ಇವರ ಈ ಮಾತನ್ನು ವಿಮರ್ಶಿಸಬೇಕಾಗುತ್ತದೆ:

1. ಈ ಹದೀಸ್ ಸಹೀಹ್ ಎಂದು ದೃಢಪಟ್ಟ ಹದೀಸಾಗಿದೆ. ಇಮಾಮ್ ಮುಸ್ಲಿಮ್‌ರವರು ಇದನ್ನು ವರದಿ ಮಾಡಿದ್ದಾರೆ ಮತ್ತು ಯಾರೂ ಕೂಡ ಇದನ್ನು ದಈಫ್ ಎಂದು ಹೇಳಿಲ್ಲ.

2. ಕರ್ಮಶಾಸ್ತ್ರಜ್ಞರಲ್ಲಿ ಈ ರೀತಿ ಅಭಿಪ್ರಾಯಪಟ್ಟವರ ಬಗ್ಗೆ (ಅಂದರೆ ಮೂರು ಫರ್ಸಖ್‌ಗಿಂತ ಹೆಚ್ಚು ದೂರ ಪ್ರಯಾಣ ಮಾಡಿದರೆ ಕಸ್ರ್ ಮಾಡಬಹುದು ಎಂದು ಅಭಿಪ್ರಾಯಪಟ್ಟವರ ಬಗ್ಗೆ) ಅರಿವಿಲ್ಲದಿರುವುದು ಹದೀಸಿನ ಪ್ರಕಾರ ಅಮಲ್ ಮಾಡುವುದರಿಂದ ತಡೆಯುವುದಿಲ್ಲ. ಯಾಕೆಂದರೆ ಒಂದು ವಸ್ತುವನ್ನು ಕಂಡಿಲ್ಲ ಎಂಬುದು ಆ ವಸ್ತು ಅಸ್ತಿತ್ವದಲ್ಲಿಲ್ಲ ಎಂಬುದಕ್ಕೆ ಪುರಾವೆಯಲ್ಲ.

3. ಈ ಹದೀಸಿನ ವರದಿಗಾರರಾದ ಅನಸ್ ಇಬ್ನ್ ಮಾಲಿಕ್(ﷺ)ರವರು ಈ ರೀತಿ (ಅಂದರೆ ಮೂರು ಫರ್ಸಖ್‌ಗಿಂತ ಹೆಚ್ಚು ದೂರ ಪ್ರಯಾಣ ಮಾಡಿದರೆ ಕಸ್ರ್ ಮಾಡಬಹುದು ಎಂದು) ಅಭಿಪ್ರಾಯಪಟ್ಟಿದ್ದಾರೆ. ಅನಸ್‌ರಿಂದ ಈ ಹದೀಸನ್ನು ವರದಿ ಮಾಡಿದ ಯಹ್ಯಾ ಇಬ್ನ್ ಯಝೀದ್ ಅಲ್‌ಹುನಾಈ(ﷺ)ರವರು ಈ ಅಭಿಪ್ರಾಯವನ್ನು ಆಧರಿಸಿ ಫತ್ವಾ ನೀಡಿದ್ದಾರೆ.

ಮಾತ್ರವಲ್ಲ, ಕೆಲವು ಸಹಾಬಾಗಳು ಇದಕ್ಕಿಂತಲೂ (ಮೂರು ಫರ್ಸಖ್‌ಗಿಂತಲೂ) ಕಮ್ಮಿ ಪ್ರಯಾಣ ಮಾಡಿದರೆ ಕಸ್ರ್ ಮಾಡುತ್ತಿದ್ದರೆಂದು ವರದಿಯಾಗಿದೆ.

ಇಬ್ನ್ ಅಬೀ ಶೈಬಾರವರು ಮುಹಮ್ಮದ್ ಇಬ್ನ್ ಝೈದ್ ಇಬ್ನ್ ಖುಲೈದಃರಿಂದ; ಅವರು ಇಬ್ನ್ ಉಮರ್(ﷺ)ರಿಂದ ವರದಿ ಮಾಡಿದ ಹದೀಸಿನಲ್ಲಿ ಇಬ್ನ್ ಉಮರ್(ﷺ)ರವರು ಹೇಳುತ್ತಾರೆ:

تُقْصَرُ الصَّلَاةُ فِي مَسِيرَةِ ثَلَاثَةِ أَمْيَالٍ.

**“ಮೂರು ಮೈಲ್ ದೂರ ಪ್ರಯಾಣ ಮಾಡಿದರೆ ನಮಾಝನ್ನು ಕಸ್ರ್ ಮಾಡಬಹುದು.” [ಇಬ್ನ್ ಅಬೀ ಶೈಬಾ]**

ನಾನು ‘ಇರ್ವಾಉಲ್ ಗಲೀಲ್’ನಲ್ಲಿ ಹೇಳಿದಂತೆ ಇದರ ಸನದ್ ಸಹೀಹ್ ಆಗಿದೆ.

ಇಬ್ನ್ ಉಮರ್(﵄)ರಿಂದ ಇನ್ನೊಂದು ಹಾದಿಯ ಮೂಲಕ ವರದಿಯಾಗಿರುವ ಪ್ರಕಾರ ಅವರು ಹೇಳುತ್ತಾರೆ:

إِنِّي لَأُسَافِرُ السَّاعَةَ مِنَ النَّهَارِ وَأَقْصِرُ.

**"ನಾನು ಹಗಲಿನ ಒಂದು ತಾಸು ಪ್ರಯಾಣ ಮಾಡಿದರೆ ಕಸ್ರ್ ಮಾಡುತ್ತೇನೆ."**

ಇದರ ಸನದ್ ಸಹೀಹ್ ಆಗಿದೆ. ಅಲ್‌ಹಾಫಿಝ್ ಇಬ್ನ್ ಹಜರ್ ತಮ್ಮ 'ಫತ್‌ಹುಲ್ ಬಾರಿ'ಯಲ್ಲಿ ಇದನ್ನು ಸಹೀಹ್ ಎಂದಿದ್ದಾರೆ.

ಇಬ್ನ್ ಉಮರ್(﵄)ರಿಂದ ವರದಿಯಾದ ಇನ್ನೊಂದು ವರದಿಯಲ್ಲಿ ಹೀಗಿದೆ:

أَنَّهُ كَانَ يُقِيمُ بِمَكَّةَ فَإِذَا خَرَجَ إِلَى مِنًى قَصَرَ.

**"ಅವರು (ಇಬ್ನ್ ಉಮರ್) ಮಕ್ಕಾದಲ್ಲಿ ತಂಗುತ್ತಿದ್ದರು. ಅವರು ಅಲ್ಲಿಂದ ಮಿನಾಗೆ ಪ್ರಯಾಣ ಮಾಡಿದರೆ ಕಸ್ರ್ ಮಾಡುತ್ತಿದ್ದರು."**

ಹಜ್ಜತುಲ್ ವಿದಾಅ್‌ನ ಸಂದರ್ಭದಲ್ಲಿ ಮಕ್ಕಾ ನಿವಾಸಿಗಳು ಪ್ರವಾದಿ(ﷺ) ರವರೊಂದಿಗೆ ಮಿನಾಗೆ ತೆರಳಿದಾಗ ನಮಾಝನ್ನು ಕಸ್ರ್ ಮಾಡಿದ ಘಟನೆಯು ಇದನ್ನು ಬಲಪಡಿಸುತ್ತದೆ. ಈ ಘಟನೆಯು ಹದೀಸ್ ಗ್ರಂಥಗಳಲ್ಲಿ ಮತ್ತು ಚರಿತ್ರೆ ಗ್ರಂಥಗಳಲ್ಲಿ ಸುಪರಿಚಿತವೂ ಸುಪ್ರಸಿದ್ಧವೂ ಆಗಿದೆ. 'ಮುಅ್‌ಜಮುಲ್ ಬುಲ್ದಾನ್' ಎಂಬ ಗ್ರಂಥದಲ್ಲಿರುವ ಪ್ರಕಾರ ಮಕ್ಕಃ ಮತ್ತು ಮಿನಾದ ಮಧ್ಯೆಯಿರುವ ದೂರ ಒಂದು ಫರ್ಸಖ್ ಮಾತ್ರವಾಗಿದೆ.

ಜಬಿಲ್ಲಃ ಇಬ್ನ್ ಸುಹೈಮ್ ಹೇಳುತ್ತಾರೆ: ಇಬ್ನ್ ಉಮರ್(﵄)ರವರು ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ:

لَوْ خَرَجْتَ مَيْلًا قَصَرْتَ الصَّلَاةَ.

**"ನೀನು ಒಂದು ಮೈಲ್ ದೂರ ಪ್ರಯಾಣ ಮಾಡಿದರೆ ನಿನಗೆ ಕಸ್ರ್ ಮಾಡಬಹುದು."**

ಇದನ್ನು ಅಲ್‌ಹಾಫಿಝ್ ಇಬ್ನ್ ಹಜರ್‌ರವರು ಉದ್ಧರಿಸಿ ಸಹೀಹ್ ಎಂದಿದ್ದಾರೆ.

ಮೇಲೆ ಹೇಳಲಾಗಿರುವ ದೂರಗಳಿಗಿಂತಲೂ ಹೆಚ್ಚು ದೂರ ಪ್ರಯಾಣ ಮಾಡಿದರೆ ಇಬ್ನ್ ಉಮರ್(﵄)ರವರು ಕಸ್ರ್ ಮಾಡುತ್ತಿದ್ದರು ಎಂದು 'ಅಲ್‌ಮುವತ್ತ' ಮತ್ತಿತರ ಗ್ರಂಥಗಳಲ್ಲಿ ಸಹೀಹಾದ ಸನದ್‌ಗಳೊಂದಿಗೆ ವರದಿಯಾಗಿರುವ ವರದಿಗಳು ಇದಕ್ಕೆ ವಿರುದ್ಧವಾಗುವುದಿಲ್ಲ. ಅದೇ ರೀತಿ ಕಸ್ರ್ ಮಾಡುವುದಕ್ಕಿರುವ ಕನಿಷ್ಠ ದೂರವನ್ನು (ಮೂರು ಫರ್ಸಖ್‌ಗಳನ್ನು) ತಲುಪಿದರೆ ಕಸ್ರ್ ಮಾಡುವುದನ್ನು ಕೂಡ ಇದು ವಿರೋಧಿಸುವುದಿಲ್ಲ. ಮೇಲೆ ಹೇಳಲಾಗಿರುವ ವರದಿಗಳೆಲ್ಲವೂ ಮೂರು

ಫರ್ಸಖ್‌ಗಿಂತಲೂ ಕಡಿಮೆ ದೂರ ಪ್ರಯಾಣ ಮಾಡಿದರೂ ಕೂಡ ಕಸ್ರ್ ಮಾಡುವುದಕ್ಕೆ ಅನುಮತಿಯಿದೆ ಎಂಬುದಕ್ಕಿರುವ ಸ್ಪಷ್ಟ ಪುರಾವೆಗಳಾಗಿವೆ.

ಆದ್ದರಿಂದ ಮೂರು ಫರ್ಸಖ್‌ಗಿಂತಲೂ ಕಡಿಮೆ ದೂರ ಪ್ರಯಾಣ ಮಾಡಿದರೆ ಕಸ್ರ್ ಮಾಡಬಹುದು ಎಂಬುದಕ್ಕೆ ಸ್ಪಷ್ಟ ಪುರಾವೆಗಳಿರುವಾಗ ಮೂರು ಫರ್ಸಖ್ ದೂರ ಪ್ರಯಾಣ ಮಾಡಿದರೆ ಕಸ್ರ್ ಮಾಡುವುದನ್ನು ತಿರಸ್ಕರಿಸುವುದು ಸರಿಯಲ್ಲ.

ಅಲ್‌ಹಾಫಿಝ್ ಇಬ್ನ್ ಹಜರ್ ತಮ್ಮ 'ಫತ್‌ಹುಲ್ ಬಾರಿ'ಯಲ್ಲಿ ಹೇಳುತ್ತಾರೆ:

وَهُوَ أَصَحُّ حَدِيثٍ وَرَدَ فِي بَيَانِ ذَلِكَ وَأَصْرَحُهُ، وَقَدْ حَمَلَهُ مَنْ خَالَفَهُ عَلَى أَنَّ الْمُرَادَ بِهِ الْمَسَافَةُ الَّتِي يُبْتَدَأُ مِنْهَا الْقَصْرُ لَا غَايَةُ السَّفَرِ، وَلَا يَخْفَى بُعْدُ هَذَا الْحَمْلِ، مَعَ أَنَّ الْبَيْهَقِيَّ ذَكَرَ فِي رِوَايَتِهِ مِنْ هَذَا الْوَجْهِ أَنَّ يَحْيَى بْنَ يَزِيدَ قَالَ: سَأَلْتُ أَنَسًا عَنْ قَصْرِ الصَّلَاةِ وَكُنْتُ أَخْرُجُ إِلَى الْكُوفَةِ -يَعْنِي مِنَ الْبَصْرَةِ- أُصَلِّي رَكْعَتَيْنِ رَكْعَتَيْنِ حَتَّى أَرْجِعَ، فَقَالَ أَنَسٌ فَذَكَرَ الْحَدِيثَ، فَظَهَرَ أَنَّهُ سَأَلَهُ عَنْ جَوَازِ الْقَصْرِ فِي السَّفَرِ لَا عَنِ الْمَوْضِعِ الَّذِي يُبْتَدَأُ الْقَصْرُ مِنْهُ. ثُمَّ إِنَّ الصَّحِيحَ فِي ذَلِكَ أَنَّهُ لَا يَتَقَيَّدُ بِمَسَافَةٍ بَلْ بِمُجَاوَزَةِ الْبَلَدِ الَّذِي يَخْرُجُ مِنْهَا، وَرَدَّهُ الْقُرْطُبِي بِأَنَّهُ مَشْكُوكٌ فِيهِ فَلَا يُحْتَجُّ بِهِ. فَإِنْ كَانَ الْمَرْدُودُ بِهِ أَنَّهُ لَا يُحْتَجُّ بِهِ فِي التَّحْدِيدِ بِثَلَاثَةِ أَمْيَالٍ فَمُسَلَّمٌ، لَكِنْ لَا يَمْتَنِعُ أَنْ يُحْتَجَّ بِهِ فِي التَّحْدِيدِ بِثَلَاثَةِ فَرَاسِخَ، فَإِنَّ الثَّلَاثَةَ أَمْيَالٍ مُنْدَرِجَةٌ فِيهَا فَيُؤْخَذُ بِالْأَكْثَرِ احْتِيَاطًا، وَقَدْ رَوَى ابْنُ أَبِي شَيْبَةَ عَنْ حَاتِمِ بْنِ إِسْمَاعِيلَ عَنْ عَبْدِ الرَّحْمَنِ بْنِ حَرْمَلَةَ قَالَ: قُلْتُ لِسَعِيدِ بْنِ الْمُسَيَّبِ: أَأَقْصُرُ الصَّلَاةَ وَأُفْطِرُ فِي بُرَيْدٍ مِنَ الْمَدِينَةِ؟ قَالَ: نَعَمْ. وَاللَّهُ أَعْلَمُ.

“ಇದು ಕಸ್ರ್ ಮಾಡುವುದನ್ನು ವಿವರಿಸುವ ವಿಷಯದಲ್ಲಿ ವರದಿಯಾಗಿರುವ ಅತ್ಯಂತ ಸಹೀಹಾದ ಮತ್ತು ಅತ್ಯಂತ ಸ್ಪಷ್ಟವಾದ ಹದೀಸಾಗಿದೆ. ಈ ಅಭಿಪ್ರಾಯಕ್ಕೆ (ಅಂದರೆ ಮೂರು ಫರ್ಸಖ್ ಪ್ರಯಾಣ ಮಾಡಿದರೆ ಕಸ್ರ್ ಮಾಡಬಹುದು ಎಂಬ ಅಭಿಪ್ರಾಯಕ್ಕೆ) ವಿರುದ್ಧವಾಗಿರುವವರು ಹೇಳುವ ಪ್ರಕಾರ ಈ ಹದೀಸಿನ ಉದ್ದೇಶವು ಎಲ್ಲಿಂದ ಕಸ್ರ್ ಮಾಡಲು ಆರಂಭಿಸಬೇಕು ಎಂಬುದಾಗಿದೆಯೇ ಹೊರತು ಎಷ್ಟರ ತನಕ ಪ್ರಯಾಣ ಮಾಡಿದರೆ ಕಸ್ರ್ ಮಾಡಬೇಕು ಎಂಬುದಲ್ಲ.

ಈ ರೀತಿ ಹೇಳುವುದು ಸರಿಯಲ್ಲ ಎಂಬುದು ಸ್ಪಷ್ಟ. ಮಾತ್ರವಲ್ಲದೆ, ಅಲ್‌ಬೈಹಕೀ ವರದಿ ಮಾಡಿದ ವರದಿಯಲ್ಲಿರುವ ಪ್ರಕಾರ ಯಹ್ಯಾ ಇಬ್ನ್ ಯಝೀದ್‌ರವರು ಹೇಳುತ್ತಾರೆ: ನಾನು ಅನಸ್(رضي الله عنه)ರೊಂದಿಗೆ ನಮಾಝನ್ನು ಕಸ್ರ್ ಮಾಡುವುದರ ಬಗ್ಗೆ ಕೇಳಿದೆ. ಯಾಕೆಂದರೆ ನಾನು ಬಸ್ರಾದಿಂದ ಕೂಫಕ್ಕೆ ಪ್ರಯಾಣ ಮಾಡುವಾಗ ಮರಳಿ ಬರುವ ತನಕ

ಎರಡೆರಡು ರಕ್‌ಅತ್ ನಮಾಝ್ ಮಾಡುತ್ತಿದ್ದೆ. ಆಗ ಅನಸ್(ﷺ)ರವರು ಈ ಹದೀಸನ್ನು ಹೇಳಿದರು. (ಅಂದರೆ ಪ್ರವಾದಿ(ﷺ)ರವರು ಮೂರು ಮೈಲ್ ಅಥವಾ ಮೂರು ಫರ್ಸಖ್ ದೂರ ಪ್ರಯಾಣ ಮಾಡಿದರೆ ಕಸ್ರ್ ಮಾಡುತ್ತಿದ್ದರು ಎಂಬ ಹದೀಸನ್ನು ಹೇಳಿದರು).

ಇದರಿಂದ ಸ್ಪಷ್ಟವಾಗುವ ಪ್ರಕಾರ ಹದೀಸಿನ ಉದ್ದೇಶವು ಯಾತ್ರೆಯಲ್ಲಿ ಕಸ್ರ್ ಮಾಡಬಹುದೇ ಎಂಬುದಾಗಿದೆಯೇ ಹೊರತು ಎಲ್ಲಿಂದ ಕಸ್ರ್ ಮಾಡಲು ಆರಂಭಿಸಬೇಕು ಎಂಬುದಲ್ಲ. ಮಾತ್ರವಲ್ಲದೆ ಸಹೀಹಾದ ಅಭಿಪ್ರಾಯ ಪ್ರಕಾರ ಕಸ್ರ್ ಮಾಡಲು ಆರಂಭಿಸುವುದು ದೂರವನ್ನು ಅವಲಂಬಿಸಿಕೊಂಡಿಲ್ಲ ಬದಲಾಗಿ ಪಟ್ಟಣವನ್ನು ದಾಟುವುದನ್ನು ಅವಲಂಬಿಸಿಕೊಂಡಿದೆ.

ಈ ಹದೀಸಿನಲ್ಲಿ ಸಂಶಯವಿರುವುದರಿಂದ (ಅಂದರೆ ಮೂರು ಮೈಲ್ ಅಥವಾ ಮೂರು ಫರ್ಸಖ್ ಎಂಬ ಸಂಶಯವಿರುವುದರಿಂದ) ಅಲ್‌ಕುರ್ತುಬೀ ಈ ಅಭಿಪ್ರಾಯವನ್ನು ತಿರಸ್ಕರಿಸಿದ್ದಾರೆ ಮತ್ತು ಈ ಹದೀಸನ್ನು ಪುರಾವೆಯಾಗಿ ಮಂಡಿಸಲಾಗದು ಎಂದಿದ್ದಾರೆ. ಅವರು ತಿರಸ್ಕರಿಸಿರುವುದು ಕಸ್ರ್ ಮಾಡುವುದಕ್ಕಿರುವ ಗಡಿಯಾಗಿ ಮೂರು ಮೈಲ್ ದೂರವನ್ನು ನಿಶ್ಚಯಿಸುವುದಕ್ಕೆ ಇದನ್ನು ಪುರಾವೆಯಾಗಿ ಮಂಡಿಸುವುದನ್ನಾಗಿದ್ದರೆ ಅದನ್ನು ಒಪ್ಪಿಕೊಳ್ಳಬಹುದು. ಆದರೆ ಕಸ್ರ್ ಮಾಡುವುದಕ್ಕಿರುವ ಗಡಿಯಾಗಿ ಮೂರು ಫರ್ಸಖ್ ದೂರವನ್ನು ನಿಶ್ಚಯಿಸುವುದನ್ನು ಇದು ವಿರೋಧಿಸುವುದಿಲ್ಲ. ಯಾಕೆಂದರೆ ಇಲ್ಲಿ ಸಂಶಯವಿರುವುದು ಮೂರು ಮೈಲ್ ಮತ್ತು ಮೂರು ಫರ್ಸಖ್‌ನ ಮಧ್ಯೆಯಾಗಿದೆ. ಆದ್ದರಿಂದ ಸೂಕ್ಷ್ಮತೆಗಾಗಿ ಅತಿ ಹೆಚ್ಚಿನ ದೂರವನ್ನು (ಅಂದರೆ ಮೂರು ಫರ್ಸಖ್ ದೂರವನ್ನು) ಸ್ವೀಕರಿಸಲಾಗುತ್ತದೆ.

ಇಬ್ನ್ ಅಬೀ ಶೈಬಾ ವರದಿ ಮಾಡಿದ ಪ್ರಕಾರ ಅಬ್ದುರ್ರಹ್ಮಾನ್ ಇಬ್ನ್ ಹರ್ಮಲಃರವರು ಸಈದ್ ಇಬ್ನುಲ್ ಮುಸಯ್ಯಬ್(ﷺ)ರೊಂದಿಗೆ ಕೇಳುತ್ತಾರೆ: ಮದೀನದ ಬುರೈದ್‌ನಲ್ಲಿ ನಾನು ನಮಾಝನ್ನು ಕಸ್ರ್ ಮಾಡಬಹುದೇ ಮತ್ತು ಉಪವಾಸ ಆಚರಿಸುವುದನ್ನು ತೊರೆಯಬಹುದೇ? ಅವರು ಹೇಳಿದರು: ಹೌದು. ಹೆಚ್ಚು ಬಲ್ಲವನು ಅಲ್ಲಾಹನಾಗಿದ್ದಾನೆ."

ಇಬ್ನ್ ಅಬೀ ಶೈಬಾರ ಪ್ರಕಾರ ಇದರ ಸನದ್ ಸಹೀಹ್ ಆಗಿದೆ.

ಅಲ್ಲಜ್ಲಾಜ್‌ರಿಂದ ವರದಿಯಾದ ಪ್ರಕಾರ ಅವರು ಹೇಳುತ್ತಾರೆ:

كُنَّا نُسَافِرُ مَعَ عُمَرَ ﷺ ثَلَاثَةَ أَمْيَالٍ فَنَتَجَوَّزُ فِي الصَّلَاةِ وَنُفْطِرُ.

"ನಾವು ಉಮರ್(ﷺ)ರೊಂದಿಗೆ ಮೂರು ಮೈಲ್ ದೂರ ಪ್ರಯಾಣ ಮಾಡಿದರೆ ನಮಾಝನ್ನು ಕಸ್ರ್ ಮಾಡುತ್ತಿದ್ದೆವು ಮತ್ತು ಉಪವಾಸವನ್ನು ತೊರೆಯುತ್ತಿದ್ದೆವು."

ಇದರ ಸನದ್ ಹಸನ್ ಆಗುವ ಸಾಧ್ಯತೆಯನ್ನು ಹೊಂದಿದೆ. ಇದರ ವರದಿಗಾರರೆಲ್ಲರೂ ವಿಶ್ವಾಸಯೋಗ್ಯರಾಗಿದ್ದಾರೆ. ಆದರೆ ಅಲ್‌ವರದ್ ಇಬ್ನ್ ಸುಮಾಮಃ ಎಂಬವರ ಹೊರತು. ಮೂರು ವರದಿಗಾರರು ಇವರಿಂದ ವರದಿ ಮಾಡಿದ್ದಾರೆ.

ಇಬ್ನ್ ಸಅ್‌ದ್ ಹೇಳುತ್ತಾರೆ: "ಇವರು ಪರಿಚಿತ ವ್ಯಕ್ತಿಯಾಗಿದ್ದಾರೆ. ಬಹಳ ಕಮ್ಮಿ ಹದೀಸ್‌ಗಳನ್ನು ವರದಿ ಮಾಡಿದವರಾಗಿದ್ದಾರೆ."

ಹದೀಸಿನಲ್ಲಿ ವರದಿಯಾದ ಮೂರು ಫರ್ಸಖ್‌ಗಿಂತಲೂ ಕಡಿಮೆ ದೂರದಲ್ಲೂ ಕಸ್ರ್ ಮಾಡುವುದಕ್ಕೆ ಅನುಮತಿಯಿದೆಯೆಂದು ಈ ಎಲ್ಲ ಆಸಾರ್‌ಗಳು (ಸಹಾಬಾಗಳ ಚರ್ಯೆಗಳು) ಸೂಚಿಸುತ್ತವೆ. ಇದು ಸಹಾಬಾಗಳ ಪಾಂಡಿತ್ಯದ ಫಲವಾಗಿದೆ. ಯಾಕೆಂದರೆ ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ಸಫರ್ (ಪ್ರಯಾಣ)ವನ್ನು ಅನಿರ್ಬಂಧಿತವಾಗಿ ಪ್ರಸ್ತಾಪಿಸಲಾಗಿದೆ. ಅದಕ್ಕೆ ಯಾವುದೇ ದೂರವನ್ನು ನಿಶ್ಚಯಿಸಿಲ್ಲ.

ಉದಾಹರಣೆಗೆ ಅಲ್ಲಾಹು ಹೇಳುತ್ತಾನೆ:

﴿وَإِذَا ضَرَبْتُمْ فِي الْأَرْضِ فَلَيْسَ عَلَيْكُمْ جُنَاحٌ أَنْ تَقْصُرُوا مِنَ الصَّلَاةِ﴾

**"ನೀವು ಭೂಮಿಯಲ್ಲಿ ಪ್ರಯಾಣ ಮಾಡುವಾಗ ನಮಾಝನ್ನು ಸಂಕ್ಷಿಪ್ತಗೊಳಿಸಿ ನಿರ್ವಹಿಸುವುದರಲ್ಲಿ ನಿಮಗೆ ದೋಷವಿಲ್ಲ." [ಕುರ್‌ಆನ್ 4:101]**

ಆದ್ದರಿಂದ ಹದೀಸಿನ ಮಧ್ಯೆ ಮತ್ತು ಆಸಾರ್‌ಗಳ ಮಧ್ಯೆ ಯಾವುದೇ ವಿರೋಧಾಭಾಸವಿಲ್ಲ. ಯಾಕೆಂದರೆ ಮೂರು ಫರ್ಸಖ್‌ಗಿಂತಲೂ ಕಡಿಮೆ ದೂರದಲ್ಲಿ ಕಸ್ರ್ ಮಾಡಬಾರದೆಂದು ಹದೀಸಿನಲ್ಲಿ ಹೇಳಲಾಗಿಲ್ಲ.

ಈ ಕಾರಣದಿಂದಲೇ ಅಲ್ಲಾಮಾ ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

وَلَمْ يَحُدَّ ﷺ لِأُمَّتِهِ مُسَافَةً مَحْدُودَةً لِلْقَصْرِ وَالْفِطْرِ، بَلْ أَطْلَقَ لَهُمْ ذَلِكَ فِي مُطْلَقِ السَّفَرِ وَالضَّرْبِ فِي الْأَرْضِ، كَمَا أَطْلَقَ لَهُمُ التَّيَمُّمَ فِي كُلِّ سَفَرٍ، وَأَمَّا مَا يُرْوَى عَنْهُ مِنَ التَّحْدِيدِ بِالْيَوْمِ أَوْ يَوْمَيْنِ أَوِ الثَّلَاثَةِ فَلَمْ يَصِحَّ عَنْهُ مِنْهَا شَيْءٌ الْبَتَّةَ، وَاللَّهُ أَعْلَمُ.

**"ಕಸ್ರ್ ಮಾಡುವುದಕ್ಕೆ ಮತ್ತು ಉಪವಾಸ ತೊರೆಯುವುದಕ್ಕೆ ಪ್ರವಾದಿ(ﷺ)ರವರು ತಮ್ಮ ಸಮುದಾಯಕ್ಕೆ ಇಂತಿಷ್ಟು ದೂರ ಪ್ರಯಾಣ ಮಾಡಬೇಕೆಂಬ ಮಿತಿಯನ್ನು ನಿಶ್ಚಯಿಸಿಲ್ಲ. ಬದಲಾಗಿ ಎಲ್ಲ ಪ್ರಯಾಣಗಳಲ್ಲೂ ತಯಮ್ಮುಮ್ ಮಾಡಬಹುದೆಂದು ಅನಿರ್ಬಂಧಿತವಾಗಿ ಪ್ರಸ್ತಾಪಿಸಿದಂತೆ ಎಲ್ಲ ಪ್ರಯಾಣಗಳಲ್ಲೂ ಕಸ್ರ್ ಮಾಡಬಹುದೆಂಬ ವಿಧದಲ್ಲಿ ಇದನ್ನು ಅನಿರ್ಬಂಧಿತವಾಗಿ ಪ್ರಸ್ತಾಪಿಸಿದ್ದಾರೆ. ಇನ್ನು ಕಸ್ರ್ ಮಾಡುವುದಕ್ಕೆ ಪ್ರವಾದಿ(ﷺ)ರವರು ಒಂದು ದಿನದ ಪ್ರಯಾಣ, ಎರಡು ದಿನದ ಪ್ರಯಾಣ ಅಥವಾ ಮೂರು ದಿನದ ಪ್ರಯಾಣವೆಂಬ ಮಿತಿಯನ್ನು ನಿಶ್ಚಯಿಸಿದ್ದಾರೆಂದು ವರದಿಯಾಗಿರುವ**

**ಹದೀಸ್‌ಗಳ ಬಗ್ಗೆ ಹೇಳುವುದಾದರೆ ಅವುಗಳ ಪೈಕಿ ಯಾವುದು ಕೂಡ ಸಹೀಹಲ್ಲ. ಹೆಚ್ಚು ಬಲ್ಲವನು ಅಲ್ಲಾಹನಾಗಿದ್ದಾನೆ.”**

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಹೇಳುತ್ತಾರೆ:

كُلُّ اسْمٍ لَيْسَ لَهُ حَدٌّ فِي اللُّغَةِ وَلَا فِي الشَّرْعِ، فَالْمَرْجَعُ فِيهِ إِلَى الْعُرْفِ، فَمَا كَانَ سَفَرًا فِي عُرْفِ النَّاسِ فَهُوَ السَّفَرُ الَّذِي عَلَّقَ بِهِ الشَّارِعُ الْحُكْمَ.

**“ಭಾಷೆಯಲ್ಲಾಗಲಿ ಶರೀಅತ್ತಿನಲ್ಲಾಗಲಿ ಯಾವುದೇ ಒಂದು ಮಿತಿಯನ್ನು ಹೊಂದಿರದ ವಿಷಯಗಳನ್ನು ವಾಡಿಕೆಯೆಡೆಗೆ ಮರಳಿಸಲಾಗುತ್ತದೆ. ಜನರು ವಾಡಿಕೆಯ ಪ್ರಕಾರ ಯಾವುದನ್ನು ಸಫರ್ (ಯಾತ್ರೆ) ಎಂದು ಕರೆಯುತ್ತಾರೋ, ಅದೇ ಸಫರ್‌ಗಾಗಿದೆ ಅಲ್ಲಾಹು ನಿಯಮವನ್ನು ಜೋಡಿಸಿರುವುದು.”**

ನಮಾಝನ್ನು ಕಸ್ರ್ ಮಾಡುವುದಕ್ಕಿರುವ ದೂರದ ಬಗ್ಗೆ ಉಲಮಾಗಳು ಅತ್ಯಧಿಕ ಭಿನ್ನಾಭಿಪ್ರಾಯವನ್ನು ಹೊಂದಿದ್ದಾರೆ. ಅವರಿಗೆ ಈ ವಿಷಯದಲ್ಲಿ ಸುಮಾರು ಇಪ್ಪತ್ತರಷ್ಟು ಅಭಿಪ್ರಾಯಗಳಿವೆ. ನಾವು ಮೇಲೆ ಪ್ರಸ್ತಾಪಿಸಿದ ಇಬ್ನ್ ತೈಮಿಯ್ಯಃ ಮತ್ತು ಇಬ್ನುಲ್ ಕಯ್ಯಿಮ್‌ರವರ ಅಭಿಪ್ರಾಯವು ಸತ್ಯಕ್ಕೆ ಹೆಚ್ಚು ಹತ್ತಿರದಲ್ಲಿದೆ ಮತ್ತು ಇಸ್ಲಾಮಿನ ಸರಳತೆಯೊಂದಿಗೆ ಹೆಚ್ಚು ಹೊಂದಿಕೊಳ್ಳುತ್ತದೆ.

ಒಂದು ದಿನದ, ಅಥವಾ ಎರಡು ದಿನದ, ಅಥವಾ ಮೂರು ದಿನದ ಪ್ರಯಾಣದಲ್ಲಿ ಮಾತ್ರ ಕಸ್ರ್ ಮಾಡಬಹುದೆಂದು ಮಿತಿಯನ್ನು ಜನರ ಮೇಲೆ ಹೇರುವುದಾದರೆ ಜನರು ತಾವು ಪ್ರಯಾಣ ಮಾಡುವ ದಾರಿಯ ಬಗ್ಗೆ ಅರಿವನ್ನು ಹೊಂದಿರಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ಯಾಕೆಂದರೆ ಕಸ್ರ್ ಮಾಡಬೇಕಾದರೆ ಇಂತಹ ದಾರಿಯ ಮೂಲಕ ಪ್ರಯಾಣ ಮಾಡಿದರೆ ಇಂತಿಷ್ಟು ದಿನಗಳಲ್ಲಿ ಪ್ರಯಾಣವನ್ನು ಮುಗಿಸಬಹುದೆಂಬ ಅರಿವು ಪ್ರಯಾಣ ಮಾಡುವವರಿಗಿರಬೇಕಾದ ಅನಿವಾರ್ಯತೆಯಿದೆ. ಈ ಅರಿವು ಜನರಲ್ಲಿ ಹೆಚ್ಚಿನವರಿಗೂ ಇದೆಯೆಂದು ಹೇಳಲು ಸಾಧ್ಯವಿಲ್ಲ. ವಿಶೇಷವಾಗಿ ಹೊಸದಾದ ಒಂದು ಊರಿಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ.

ಈ ಹದೀಸಿನಲ್ಲಿ ಇನ್ನೊಂದು ಪ್ರಯೋಜನವಿದೆ. ಅದೇನೆಂದರೆ ಊರಿನಿಂದ ಹೊರಟ ಬಳಿಕವೇ ಕಸ್ರ್ ಮಾಡಬೇಕೆಂದು ಈ ಹದೀಸ್ ಸೂಚಿಸುತ್ತದೆ. ಇದು ಬಹುಸಂಖ್ಯಾತ ವಿದ್ವಾಂಸರ ಅಭಿಪ್ರಾಯವೂ ಆಗಿದೆ.

‘ನೈಲುಲ್ ಅವ್ತಾರ್’ನಲ್ಲಿ ಹೀಗೆ ಹೇಳಲಾಗಿದೆ:

وَذَهَبَ بَعْضُ الْكُوفِيِّينَ إِلَى أَنَّهُ إِذَا أَرَادَ السَّفَرَ يُصَلِّي رَكْعَتَيْنِ وَلَوْ كَانَ فِي مَنْزِلِهِ، وَمِنْهُمْ مَنْ قَالَ: إِذَا رَكِبَ قَصَرَ إِنْ شَاءَ. وَرَجَّحَ ابْنُ الْمُنْذِرِ الْأَوَّلَ بِأَنَّهُمْ اتَّفَقُوا عَلَى أَنَّهُ يَقْصِرُ إِذَا فَارَقَ الْبُيُوتَ، وَاخْتَلَفُوا فِيمَا قَبْلَ ذَلِكَ.

**"ಪ್ರಯಾಣ ಮಾಡಲು ಉದ್ದೇಶಿಸಿದರೆ ಮನೆಯಲ್ಲಿ ಕೂಡ ಕಸ್ರ್ ಮಾಡಬಹುದೆಂದು ಕೂಫೀ ವಿದ್ವಾಂಸರ ಪೈಕಿ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಯಾಣಕ್ಕಾಗಿ ವಾಹನವನ್ನು ಏರುವಾಗ ಅವನು ಇಚ್ಛಿಸಿದರೆ ಕಸ್ರ್ ಮಾಡಬಹುದೆಂದು ಅವರ ಪೈಕಿ ಇತರ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇಬ್ನುಲ್ ಮುಂದಿರ್ ಮೊದಲನೆ ಅಭಿಪ್ರಾಯವನ್ನು (ಅಂದರೆ ಊರಿನಿಂದ ಹೊರಟ ಬಳಿಕವೇ ಕಸ್ರ್ ಮಾಡಬಹುದೆಂಬ ಅಭಿಪ್ರಾಯವನ್ನು) ಪ್ರಬಲವೆಂದಿದ್ದಾರೆ. ಯಾಕೆಂದರೆ ಊರಿನಿಂದ ಹೊರಟ ಬಳಿಕ ಕಸ್ರ್ ಮಾಡಬಹುದೆಂಬ ವಿಷಯದಲ್ಲಿ ಉಲಮಾಗಳು ಒಮ್ಮತಾಭಿಪ್ರಾಯ ಹೊಂದಿದ್ದಾರೆ. ಅವರಿಗೆ ಭಿನ್ನಾಭಿಪ್ರಾಯವಿರುವುದು ಇದಕ್ಕಿಂತ ಮುಂಚೆಯೇ ಕಸ್ರ್ ಮಾಡಲು ಪ್ರಾರಂಭಿಸಬಹುದೇ ಎಂಬ ವಿಷಯದಲ್ಲಾಗಿದೆ."**

ಅವರು ಮುಂದುವರಿದು ಹೇಳುತ್ತಾರೆ:

وَلَا أَعْلَمُ أَنَّ النَّبِيَّ ﷺ قَصَرَ فِي سَفَرٍ مِنْ أَسْفَارِهِ إِلَّا بَعْدَ خُرُوجِهِ مِنَ الْمَدِينَةِ.

**"ಪ್ರವಾದಿರವರು ತಮ್ಮ ಯಾವುದೇ ಪ್ರಯಾಣದಲ್ಲೂ ಮದೀನದಿಂದ ಹೊರಹೋದ ಬಳಿಕವಲ್ಲದೆ ಕಸ್ರ್ ಮಾಡಿದ್ದಾಗಿ ನಾನು ಅರಿತಿಲ್ಲ."**

ಈ ವಿಷಯದಲ್ಲಿ ಅನೇಕ ಹದೀಸ್‌ಗಳು ವರದಿಯಾಗಿವೆ. ಅವುಗಳ ಪೈಕಿ ಕೆಲವನ್ನು, ಅಂದರೆ ಅನಸ್(ﷺ), ಅಬೂ ಹುರೈರಃ(ﷺ), ಇಬ್ನ್ ಅಬ್ಬಾಸ್(ﷺ) ಹಾಗೂ ಮತ್ತಿತರರು ವರದಿ ಮಾಡಿದ ಹದೀಸ್‌ಗಳನ್ನು ನಾನು 'ಇರ್ವಾಉಲ್ ಗಲೀಲ್'ನಲ್ಲಿ ಉದ್ಧರಿಸಿದ್ದೇನೆ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********